Budget Estimates for 1972-73—Presentation

MADAM SPEAKER. –I now call upon the Finance Minister to present the Budget Estimates for the year 1972-73.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷಣಿಯವರೇ, ನೆನ್ನೆಯ ದಿವಸ ರಾಜ್ಯಪಾಲರು ಅವರ ಭಾಷಣವನ್ನು ಕನ್ನಡದಲ್ಲೇ ಮಾಡಬೇಕೆಂಬ ಬಗ್ಗೆ ಒತ್ತಾಯ ಮಾಡಿದ್ದು ನಿಮಗೆ ಗೊತ್ತಿರತಕ್ಕ ವಿಷಯವೇ ಆಗಿದೆ. ಆದರೆ ಈ ದಿವಸ ರಾಜ್ಯದ ಆಯವ್ಯಯ ಪಟ್ಟಿಯನ್ನು ಮಂಡಿಸಲಿರತಕ್ಕ ಮಾನ್ಯ ಅರ್ಥ ಸಚಿವರಾದರೋ ಕನ್ನಡ ಮಹಾವೇತ್ತರು, ಕನ್ನಡ ರಾಜ್ಯದಲ್ಲಿ ಹುಟ್ಟಿ ಬೆಳೆದವರು. ಅವರಿಗೆ ಕನ್ನಡ ಭಾಷೆ ತೀವ್ರತಮವಾಗಿ ಗೊತ್ತಿದೆ. ಆದಕಾರಣ ಅವರು ತಮ್ಮ ಈ ದಿವಸದ ಭಾಷಣವನ್ನು ಕನ್ನಡದಲ್ಲೇ ಮಾಡಬೇಕೆಂದು ಅವರನ್ನು ನಾನು ತಮ್ಮ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ನಮ್ಮ ಈ ಪ್ರಾರ್ಥನೆಯನ್ನು ಮನ್ನಣೆ ಮಾಡದೆ ಹೋದರೆ ವಿಧಿಯಿಲ್ಲದೆ ಅದನ್ನು ನಾನು ವಿರೋಧಿಸಲೇಬೇಕಾಗುತ್ತದೆ ಎಂದು ನಾನು ತಮ್ಮ ಮೂಲಕ ಅವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಣಿಯರೇ, ಮಾನ್ಯ ಫೋರ್ಪಡೆಯವರು ಹುಟ್ಟಿ ಬೆಳೆದಿರತಕ್ಕದ್ದು ಕರ್ನಾಟಕದಲ್ಲಿ ಗಂಡುಮೆಟ್ಟಿನ ಸೀಮೆ ಎನಿಸಿಕೊಂಡಿದ್ದ ನಂಡೂರು ಸಂಸ್ಥಾನದಲ್ಲಿ. ಅವರು ಮೇಲಾಗಿ ನಂಡೂರು ರಾಜಮನೆತನಕ್ಕೆ ಸೇರಿದವರು. ಈ ದಿವಸ ಅವರು ಮಂಡಿಸಲಿರುವ ರಾಜ್ಯದ ಆಯವ್ಯಯ ಪಟ್ಟಿಯನ್ನು ಅಥವಾ ಬಿಲ್ಲನ್ನು ಅವರು ಕನ್ನಡದಲ್ಲೇ ಮಂಡಿಸಬೇಕು. ನಮ್ಮ ಕನ್ನಡ ರಾಜ್ಯದಲ್ಲಿ ಹೆಚ್ಚು ಜನರಿಗೆ ಕನ್ನಡ ಭಾಷೆಯ ಪರಿಚಯವಿದೆಯೇ ವಿನಾ ಇಂಗ್ಲೀಷ್ ಭಾಷೆಯ ಪರಿಚಯ ವಿರುವುದಿಲ್ಲ. ಎರಡೂವರೆ ಕೋಟಿ ಜನರಿರತಕ್ಕ ಇಂಥ ಒಂದು ದೊಡ್ಡ ಕನ್ನಡ ನಾಡಿನಲ್ಲಿ ಬಹುಭಾಗ ಕನ್ನಡದಲ್ಲಿ ಮಾತ್ರ ಪರಿಚಯವುಳ್ಳ ಜನರಿಗೆ ಸಂಬಂಧಪಟ್ಟ ಆಯವ್ಯಯ ಪಟ್ಟಿಯನ್ನು ಕನ್ನಡದಲ್ಲಿ ಮಂಡಿಸದೆ, ಇಂಗ್ಲೀಷಿನಲ್ಲಿ ಮಂಡಿಸಿದ್ದೇ ಆದರೆ ಅದರಿಂದ ಇಡೀ ಕರ್ನಾಟಕಕ್ಕೇ ಒಂದು ದೊಡ್ಡ ಅಪಚಾರವನ್ನು ಮಾಡಿದಂತಾಗುತ್ತದೆ. ಇಂದು ಆರ್ಥಿಕ ಸಚಿವರು ಮಂಡಿಸಲು ಹೊರಟಿರುವ ಆಯವ್ಯಯ ಪಟ್ಟಿ ಶ್ರೀಮಂತಿಕೆಯಲ್ಲಿ ರೋಲಾಡಿಕೊಂಡು ಇಂಗ್ಲೀಷಿನ ಪರಿಚಯ ಪಡೆದಿರತಕ್ಕ ಕೆಲವಾರು ಜನರಿಗೆ ಸಂಬಂಧ ಪಡದೆ ಅದು ಬಡತನದಲ್ಲಿ ಹೊರಳಾಡುತ್ತಿರುವ ಕೋಟ್ಯಾಂತರ ಕನ್ನಡಿಗರಿಗೆ ಸಂಬಂಧಪಟ್ಟಿದ್ದು. ಆದ್ದರಿಂದ ಅದನ್ನು ಕನ್ನಡದಲ್ಲೇ.....

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಸದಸ್ಯರೇನು ಒಂದು ದೊಡ್ಡ ಭಾಷಣವನ್ನು ಮಾಡುತ್ತಿದ್ದಾರೋ ಅಥವಾ.....

ಶ್ರೀ ವಾಟಾಳ್ ನಾಗರಾಜ್.—ಮಧ್ಯೆ ಶ್ರೀ ವೀರಪ್ಪನವರು ಏಕೆ ಪ್ರವೇಶ ಮಾಡಬೇಕು?

Sri B. B. SAYANAK.—When an hon. Member is addressing the Chair, why is Sri Nagaraj speaking ?

ಶ್ರೀ ಕೋಣಂದೂರು ಲಿಂಗಪ್ಪ.—ಈ ನಾಡಿನ ಕೋಟಿ ಕೋಟಿ ಜನರ ಭಾಷೆಯಾದ ಕನ್ನಡ ವೇನಿದೆ ಆ ಕನ್ನಡ ಭಾಷೆಯಲ್ಲೇ ಭಾಷಣ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅವರಿಗೆ ಕನ್ನಡ ಭಾಷೆಯ ಬಗ್ಗೆ ಒಂದು ಅಭಿಮಾನ ಒಂದು ನಿಷ್ಠೆ ಇದ್ದಲ್ಲ ಅವರು ಅವರ ಭಾಷಣವನ್ನು ಕನ್ನಡದಲ್ಲೇ ಮಂಡಿಲೆಸಂದು ಸೂಚನೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈಗ ಎತ್ತಿರತಕ್ಕ ವಾದಗಳೇನಿವೆ ಅವು ಕ್ರಿಯಾಲೋಪಕ್ಕೆ ಸಂಬಂಧಪಡುವುದಿಲ್ಲ. ಮಾನ್ಯ ಸಚಿವರನ್ನು ಕನ್ನಡದಲ್ಲಿ ಭಾಷಣ ಮಾಡಿ ಎಂದು ಕೇಳಿಕೊಂಡಿದ್ದಾರೆ. ಆ ಕೇಳಿಕೆಯ ಪ್ರಕಾರ ಅವರು ಕನ್ನಡದಲ್ಲಿ ಮಾತನಾಡಿದರೂ ಮಾತನಾಡಬಹುದು.

ಶ್ರೀ ಎಂ. ಪೈ ಫೋರ್ಪಡೆ (ಆರ್ಥಿಕ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಈಗ ಈ ಮಾನ್ಯ ಸಭೆಯ ಕೆಲವು ಮಾನ್ಯ ಸದಸ್ಯರು ಒಂದು ಒಳ್ಳೆಯ ಸೂಚನೆಯನ್ನು ಮಾಡಿದ್ದಾರೆ. ಅವರು ನನ್ನ ಈಗಿನ ಭಾಷಣವನ್ನು ಕನ್ನಡದಲ್ಲೇ ಮಾಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಇದೇ ಸಭೆಯಲ್ಲಿ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನನಗೆ.....

Sri B. B. SAYANAK.—Till the Mysore-Maharashtra boundary dispute is solved, we will be here and we cannot understand Kannada. So, I request the Finance Minister to speak in English.

ಶ್ರೀ ಕೋಣಂದೂರು ಲಿಂಗಪ್ಪ.—ಇಂಗ್ಲೀಷಿನಲ್ಲೇ ಮಾತನಾಡಬೇಕೆಂದು ಹೇಳತಕ್ಕದ್ದು ಗುರಾಂಗಿರಿಯು ಒಂದು ನಂಕೇತ. ಮಹಾರಾಷ್ಟ್ರದಲ್ಲಿ ಎಲ್ಲಿಯ ಕನ್ನಡ ಸದಸ್ಯರಿಗೆ ಕನ್ನಡದಲ್ಲೆ ಮಾತನಾಡುವುದಕ್ಕೆ ಅವರ ಶಾಸನ ಸಭೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೋ!

ಶ್ರೀ ವಾಟಾಳ್ ನಾಗರಾಜ್.—ಹಾಗೆ ಹೇಳಿದ್ದು ಅವರ ಉದ್ಧಟತನವನ್ನು ತೋರಿಸುತ್ತದೆ ಎಂದು ಹೇಳುತ್ತೇನೆ. ಹೀಗೆ ಮಾಡತಕ್ಕದ್ದು ಮರಾಠಿಗರ ಗೂಂಡಾಗಿರಿ ಮತ್ತು ಅವರ ಉದ್ಧಟತನ ವಲ್ಲದೆ ಮತ್ತೇನು?

Sri B. B. SAYANAK.—The hon. Member should withdraw those words.

ಶ್ರೀ ವಾಟಾಳ್ ನಾಗರಾಜ್.—ಅದು ನೀತಿಗೆಟ್ಟ ಮಾತು.....

Sri B. B. SAYANAK.—Yesterday he said that we are traitors and today he is saying that we are **'udhats'**

Sri D. DEVARAJ URS (Chief Minister).—I submit through you, Sir, to the hon. Member that let not our emotions run like that. Let us conduct the business in a dignified manner.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಈಗ ಸಭೆಯಲ್ಲಿ ನಡೆಯುತ್ತಿರುವ ಕಾರ್ಯಕರಾಪ ಗಳನ್ನು ನೋಡಿದರೆ.....

ಒಬ್ಬ ಮಾನ್ಯ ಸದಸ್ಯರು.—ಅವರು ಹೇಳಿದ ಮಾತು ಕನ್ನಡ ಕುಲಕೋಟಿಗೇ ಬಹಳ ಅಪಮಾನ ಕರವಾದಂಥ ಮಾತು. ನಮ್ಮ ಕನ್ನಡ ರಾಜ್ಯಕ್ಕೆ ಅಂಥ ಅಪಮಾನವನ್ನುಂಟು ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ ಅವರು.—ನಾವು ಸಾಧ್ಯವಾದ ಮಟ್ಟಿಗೂ ಎಲ್ಲ ವ್ಯವಹಾರ ಗಳನ್ನೂ ಕನ್ನಡಭಾಷೆಯಲ್ಲೇ ನಡೆಸೋಣ. ಅದರೆ ಕೆಲವು ವೇಳೆ ಇಂಗ್ಲೀಷಿನಲ್ಲಿಯೂ ಭಾಷಣ ಮಾಡಬೇಕಾಗುವುದು ಮಾನ್ಯ ಸದಸ್ಯರು ಈ ಹಿಂದೆ ಇದೇ ಸಭೆಯಲ್ಲಿ ಮರಾಠಿಯಲ್ಲೇ ಮಾತನಾಡಿದರು. ಆಗ ಹಾಗೆ ಮಾತನಾಡಬೇಡಿ ಎಂದು ಯಾರೂ ಅವರನ್ನು ತಡೆಗಟ್ಟಲಿಲ್ಲ. ಆದ್ದರಿಂದ ನಾವು ಇಲ್ಲಿ ಒಂದು ಉದ್ರೇಕ ವಾತಾವರಣವನ್ನು ಉಂಟು ಮಾಡುವುದು ಬೇಡ ಎಂದು ಕೇಳಿ ಕೊಳ್ಳುತ್ತೇನೆ. ನಾವೆಲ್ಲರೂ ಇಂಥ ವಿಚಾರಗಳಲ್ಲಿ ಒಂದು ಟಾಲರೇಟ್ ಭಾವನೆಯಿಂದ ಹೋಗೋಣ.

Sri B. B. SAYANAK.—Yesterday also he said that we are traitors and today he is saying that we are 'udhats'... .....

Sri D. DEVARAJ URS. —'Udhat' is not unparliamentary.

Sri B. B. SAYANAK.—Is the word 'traitors' parliamentary?

Sri D. DEVARAJ URS.—That word is not used just now.

ಶ್ರೀ ಎಂ. ವೈ. ಘೋರ್ಪಡೆ.—ನಾನು ಮಾನ್ಯ ಸಭೆಗೆ ಆಗಲೆ ಅರಿಕೆ ಮಾಡಿಕೊಳ್ಳುತ್ತಿದ್ದೆ ಇಲ್ಲಿ ತಮಗೆಲ್ಲರಿಗೂ ತಿಳಿದಿರುವಂತೆ ನನಗೆ ಈ ದಿವಸ ಸಭೆಗೆ ಮಂಡಿಸತಕ್ಕ ನನ್ನ ಬಜೆಟ್ ಭಾಷಣ ವನ್ನು ತಯಾರಿಸುವುದಕ್ಕೆ ಸಾಕಷ್ಟು ಕಾಲಾವಕಾಶವಿರಲಿಲ್ಲ. ನಾನು ನನ್ನ ಬಜೆಟ್ ಭಾಷಣ ವನ್ನು ಇಂಗ್ಲೀಷಿನಲ್ಲೇ ತಯಾರಿಸಿರುತ್ತೇನೆ. ಆದ್ದರಿಂದ ಈ ದಿವಸ ಮಾಕ್ಯ ನನ್ನ ಭಾಷಣವನ್ನು ಇಂಗ್ಲೀಷಿನಲ್ಲಿ ಓದುವುದಕ್ಕೇ ಇಷ್ಟಪಡುತ್ತೇನೆ. ನಮ್ಮ ಪಾರ್ಲಿಯಮೆಂಟಿನಲ್ಲೂ ಕೂಡ ಇಂಥದೇ ಒಂದು ಸಂಪ್ರದಾಯವಿದೆ. ಅಲ್ಲಿ ಸಭೆಗೆ ಇಂಗ್ಲೀಷಿನಲ್ಲಿ ಭಾಷಣವನ್ನು ಓದಿದ ನಂತರ ಅದರ ತರ್ಜುಮೆಯನ್ನು ಸದಸ್ಯರಿಗೆ ಹಿಂದಿಯಲ್ಲಿ ಓದಿಸಲಾಗುತ್ತಿದೆ. ಆದರಂತೆ ಇಲ್ಲಿ ತಮ್ಮೆಲ್ಲರ ಕೈಲೂ ಈಗಾಗಲೇ ನನ್ನ ಇಂಗ್ಲೀಷ್ ಭಾಷಣದ ಕನ್ನಡ ಭಾಷಾಂತರ ಇರುತ್ತದೆ. ಮುಂದೆ ಇದರ ಚರ್ಚೆಯಾಗತಕ್ಕ ಕಾಲಕ್ಕೆ ಬೇಕಾದರೆ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡೋಣ. ತಾಪೆಲ್ಲರೂ ತಮ್ಮ ರಚನಾತ್ಮಕ ಸಲಹೆಗಳನ್ನು ತಾವು ಕೊಡಿ.

ಇನ್ನು ನನಗೆ ಕನ್ನಡದ ಬಗ್ಗೆ ಇರತಕ್ಕ ಅಭಿಮಾನದ ವಿಚಾರಕ್ಕೆ ಬಂದರೆ ಮಾನ್ಯ ಸದಸ್ಯರಿಗೆ ಕನ್ನಡ ಭಾಷೆಯ ಬಗ್ಗೆ ಏನು ಒಂದು ಅಭಿಮಾನವಿದೆಯೋ ಅದಕ್ಕಿಂತ ನನಗೆ ಒಂದು ಚೂರಾದರೂ

ಜಾಸ್ತಿ ಇದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ಇನ್ನು ಆ ಮಾನ್ಯ ಸದಸ್ಯರು ನನ್ನ ಸಂಡೂರಿನ ಬಗ್ಗೆ ಒಂದೆರಡು ಮಾತುಗಳನ್ನಾಡಿದ್ದಾರೆ. ನನ್ನ ಸಂಡೂರು ಕನ್ನಡ ಚಕ್ರಾಧಿಪತ್ಯವಾದ ವಿಜಯನಗರ ಸಂಸ್ಥಾನಕ್ಕೆ ಸೇರಿತ್ತು. ನನಗೂ ಕನ್ನಡದ ಬಗ್ಗೆ ಅತಿಶಯವಾದ ಅಭಿಮಾನವಿದೆ. ಅದರ ಬಗ್ಗೆ ಯಾರೂ ಅನುಮಾನಪಡಬೇಕಾಗಿಲ್ಲ ಅದರೆ ನಮ್ಮ ನಾಡಿನಲ್ಲಿ ನಾವು ಕನ್ನಡವನ್ನು ಬೆಳೆಸಬೇಕಾಗಿದ್ದರೆ ಇಂಗ್ಲೀಷ್ ಭಾಷೆಯನ್ನು ನಾವೇನೂ ಕೈ ಬಿಡಬೇಕಾಗಿಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ ನನಗೆ ಈ ದಿವಸ ಇಂಗ್ಲೀಷಿನಲ್ಲಿ ಮಾಡತಕ್ಕ ಭಾಷಣವನ್ನು ಕೈಬಿಡಿ ಎಂದರೆ ಸಾಧ್ಯವಾಗದ ಮಾತು. ಮುಂದಿನ ತಮ್ಮ ಭಾಷಣಗಳಾಗತಕ್ಕ ಕಾಲದಲ್ಲಿ ನಾನು ಕನ್ನಡದಲ್ಲೇ ಭಾಗವಹಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಘೋರ್ಪಡೆಯವರು ನನಗೆ ಒಂದು ನಿಮಿಷ ಅವಕಾಶವನ್ನುಂಟುಮಾಡಿಕೊಟ್ಟರೆ ಒಂದು ಮಾತನ್ನು ಕೇಳಬೇಕಾಗಿದೆ ಮಾಮೂಲನಂತೆ ಬಜೆಟ್ ಭಾಷಣದ ಕನ್ನಡ ಪ್ರತಿಗಳನ್ನು ಸದಸ್ಯರಿಗೆ ಒದಗಿಸುತ್ತಿದ್ದಾರೆ. ಆ ಕನ್ನಡ ಪ್ರತಿಯನ್ನೆ ನಟಿವರು ಏಕೆ ಓದಬಾರದು ?

ಶ್ರೀ ಎಂ. ವೈ. ಘೋರ್ಪಡೆ.—ನಾನು ಆ ಕನ್ನಡದ ಪ್ರತಿಯನ್ನು ಅಂದರೆ ಆ ತರ್ಜುಮೆಯನ್ನ ಅಮೂಲಾಗ್ರವಾಗಿ ತಿದ್ದಿರುವುದಿಲ್ಲ. ಅದನ್ನು ಸಂಪೂರ್ಣವಾಗಿ ವಿಮರ್ಶಿಸಿ ನೋಡಲು ಸಾಧ್ಯವಾಗಲಿಲ್ಲ. ಅಷ್ಟಕ್ಕೆರ್ಲಾ ಕಾರಾವಕಾಶವಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಸರಿಯಾಗಿ ನೋಡಿ ತಿದ್ದಿದೆ ಇದ್ದಂಥ ಕನ್ನಡದ ಕಾಪಿಗಳನ್ನು ಸದಸ್ಯರಿಗೆ ಒದಗಿಸಿದ್ದೀರೆಂದು ಹೇಳಿದಂತಾಯಿತು. ಅಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ಹಾಗೇನೂ ಇಲ್ಲ.

Shri M. Y. Ghorpade, (Minister for Finance).—

Hon'ble Speaker, the new Government has just taken over. The main object of presenting this interim budget is to seek a Vote on Account for the first four months of 1972-73, so that the Government gets a little more time to have a fresh look at the difficult financial situation, and all other major problems facing the State. The drift will have to be stopped, and a financial strategy evolved which protects essential developmental activity in the State and ensures reasonable growth with social justice. This budget contains no proposals for fresh taxation. It is intended to come before this House with a more purposeful budget sometime in June after a fuller and deeper assessment of the situation and the vital needs of our State.

2. As a result of the recent General Elections, a new era of political and economic co-operation between the Centre and the States has begun. We have to utilise this new climate of constructive co-operation to evolve new conventions and norms with regard to Centre-State relations to ensure balanced growth and maintain a tempo of development which is in keeping with the rising expectations of the people. Financial policies will have to be clearly related to social and economic goals which have received such a massive mandate from the people. The attitude of merely complaining against the Centre will have to give way to one of courage and co-operation to fulfil common objectives. The people do expect that clearcut and consistent effort is made in the right direction. Realities of the situation may be difficult and none too rosy. But every situation can be mastered and changed step by step. Government is determined to make this effort without fear or favour, and ensure a bright future for Mysore.

3.1 The Budget Estimates for 1971-72, as approved by Parliament in July, 1971 had estimated an overall deficit of Rs. 15.72 crores. The revised estimates now show an overall deficit of Rs. 42.60 crores. This increase in deficit is mainly because of a net shortfall in anticipated tax and non-tax revenues to the extent of Rs. 10.27 crores and increase in expenditure of Rs. 11 crores on irrigation projects, including the Cauvery Projects.

3.2 As on 31st March, 1971, the overdraft was Rs. 30.38 crores and the year 1971-72 is expected to

close with an overdraft of Rs. 76.38 crores. The total loan liabilities amount to Rs. 427.73 crores and consist of:

		(Rs. in crores)
Market Loans	....	77.49
Loans from Central Government	....	321.83
Other Loans	....	28.41

4.1 The Budget Estimates for the year 1972-73 places the revenue receipts at Rs. 293.26 crores and revenue expenditure at Rs. 292.05 crores, resulting in a revenue surplus of Rs. 1.21 crores. The revenue receipts include principally:

		(Rs. in crores)
Sales Tax	....	57.00
Excise	....	25.60
Motor Vehicles Tax	....	11.10
Entertainment Tax & Tax on Electricity etc.	....	14.13
Forest	....	16.45
Share of Income Tax	....	24.42
Share of Union Excise Duties	....	25.06
Grant-in-aid from Centre	....	29.26

4.2 The revenue expenditure of Rs. 292·05 crores includes:

		(Rs. in crores)
Education	....	60·25
Medical & Public Health	....	18·77
Public Works	....	25·06
Irrigation (including interest on irrigation capital)	....	23·30
Agriculture	....	11·95
Civil Administration	....	23·13

Of the revenue expenditure of Rs. 292·05 crores, Rs. 33·59 crores is on items in the Plan and Rs. 258·46 crores is on items under non-Plan. Much of this non-Plan expenditure is committed expenditure arising out of development during the previous Plan periods.

4.3 The revision of emoluments of Government employees in 1970 along with dearness allowance sanctioned from 1st January, 1972, amounts to an annual commitment of about Rs. 17 crores. This is a common problem for all States and no solution has yet been found to take care of its impact on State finances. It is hoped that the Government of India, Planning Commission, and the new Finance Commission will pay particular attention to this problem.

4.4 Capital expenditure of Rs. 41.28 crores has been provided in the Budget for 1972-73. This includes Rs. 25.76 crores on irrigation, of which about Rs. 11 crores is towards irrigation projects in the Cauvery basin.

4.5 Receipts from Market Loans have been placed at Rs. 12.52 crores as against repayment of Rs. 7.56 crores, giving a net capital receipt of Rs. 4.96 crores. Central loan assistance is taken at Rs. 63.72 crores as against loan repayment to the Centre amounting to Rs. 65.65 crores, resulting in a net outgo of Rs. 1.93 crores.

4.6 After taking into account all other items, the capital account shows a deficit of Rs. 31.73 crores, which results in an overall deficit of Rs. 30.52 crores, in view of the revenue surplus of Rs. 1.21 crores.

5. An account of the main features of the Budget Estimates for 1972-73 will not be complete without reference to the effort made by the State towards raising resources for relief of Bangla Desh refugees. Certain levies for this purpose were introduced during the President's Rule which are expected to yield an income of Rs. 184 lakhs during 1972-73 to be transferred to the Central account. These levies consist of the following :

		(Rs. in lakhs)
1.	The Mysore Entertainments (Amendment) Act, 1971 (President's Act No. 14 of 1971).	20.00
2.	The Mysore Motor Vehicles [Taxation on Passengers and Goods (Amendment)] Act, 1971 (President's Act, No. 15 of 1971).	50.00
3.	The Mysore Moter Vehicles Taxation (Amendment) Act, 1971 (President's Act No. 16 of 1971).	10.00
4.	The Mysore Stamp (Amendment) Act, 1971 (President's Act No. 17 of 1971).	24.00
5.	The Mysore Sales Tax (Amendment) Act, 1971 (President's Act No. 18 of 1971)	80.00
	Total	184.00

This effort symbolises the contribution by the people of Mysore to the National effort in support of

Bangla Desh and the cherished goals of socialism, secularism and democracy under the inspiring leadership of the Prime Minister Smt. Indira Gandhi.

6. The Plan outlay for the year 1972–73 as agreed to by the Planning Commission is Rs. 72.30 crores. The Plan outlay for each of the first three years of the Fourth Plan period was Rs. 66·23 crores in 1969-70, Rs. 68.98 crores in 1970–71 and Rs. 77.74 crores in 1971-72. Thus, the total Plan expenditure so far amounts to Rs. 212.95 crores or 61% of the total Plan outlay of Rs. 350 crores, which we are now confident of implementing fully.

7. The Plan outlay for the year 1972–73 consists of :

	(Rs. in crores)
Agricultural Programmes	16.75
Irrigation & Power	29.16
Co-operation & Community Development	3.12
Industry and Mining	4.08
Transport & Communication	3.27
Social Services	15.62
Miscellaneous	0.30
Total	72.30

8. Apart from this outlay, the Centrally Sponsored Schemes amount to Rs. 9.71 crores, and Central Sector Schemes to Rs. 9.59 crores. The Centrally Sponsored and the Central Sector Schemes are fully financed by the Government of India. Thus, as against a total outlay of Rs. 91.60 crores, including the State Plan of Rs. 72.30 crores, the total Central assistance amounts

to about Rs. 60 crores. In addition, the Life Insurance Corporation of India, and the Agricultural Refinance Corporation, are providing substantial assistance to supplement our developmental efforts under such items as Water Supply, Housing, Minor Irrigation and Land Development.

9. The annual Plan for 1972-73 will be financed follows :

	(Rs. in crores)
1. Negotiated borrowings by MSEB and Government	12.57
2. Additional resource-mobilisation at existing rates of taxation	18.29
3. Central assistance according to the formula of National Development Council	33.56
Total	64.42

This leaves a gap of Rs. 7.88 crores, which is expected to be met from the special assistance from the Centre towards the Plan. It may be recalled that apart from Rs. 173 crores of Central assistance towards Plan outlay of Rs. 350 crores, the Government of India had indicated special assistance of Rs. 105 crores, consisting of Rs. 60 crores towards Plan and Rs. 45 crores towards non-Plan. So far, Rs. 42.55 crores has been received from the Government of India by way of special assistance.

10.1 The overdraft is expected to be of the order of Rs. 76 crores at the end of the current year. Both

the State Government and the Centre are anxious that this should not increase indefinitely. It is desirable to find other long-term and stabler solutions to the problem of financing a level of Plan and non-Plan expenditure which is considered essential.

10.2 The Centre does make a major effort to raise resources and distribute it to the State Government for planned development. There is scope, however, to have a closer look at this whole process, by which funds are transferred from the Centre to the State, in order to ensure the balanced development of all States. Special attention will have to be given to States like Mysore where the heavy burden of loan repayment, which is a legacy of the past patterns of financing, is having an inhibiting effect and threatening to distort the direction and tempo of growth. It is significant that the Planning Commission has decided to look into these aspects more closely in order to find workable solutions. The Sixth Finance Commission may also have to examine this matter of Centre-State financial relations in a comprehensive manner.

10.3 A fresh dialogue will have to commence between the States and the Centre in order to realistically evaluate and assess the financial situation and put Centre-State financial relations on a more systematic and scientific basis. The tools of Planning will have to be sharpened and financial strategy carefully shaped, with a view to derive maximum benefit from national economic policies, programmes and common objectives. This is a two-way process which should enhance the financial strength and

stability of all parts of the country without in any way affecting the unity of India. The political climate generated in all the States as a result of the recent General Elections makes this an opportune moment which must not be missed.

11. Financial priorities and discipline will have to be improved and streamlined to cope with the delicate financial situation in which we have to function. Adhocism will have to give way to a more systematic and scientific effort. Planning will have to become increasingly sophisticated and strict in order to maximise results with the limited resources at our disposal. It would be necessary to concentrate on schemes which directly benefit the weaker sections of society. The important thing is not only to spend, but to spend effectively and wisely. Effective implementation means more efficient and honest administration. Policies both with regard to raising resources and spending will have to be carefully evolved to conform to the broad objective of growth with social justice. Accelerated growth demands that people who benefit by the process of development do not grudge contributing according to their capacities towards the goal of achieving the maximum good of the maximum number. To enthuse the people in this effort, Government will do its utmost to cut down waste, improve priorities and maximise development.

12. I now commend the Interim Budget Estimates for 1972-73 for your consideration and approval.

ಅರ್ಥಮಂತ್ರಿಗಳಾದ ಶ್ರೀ ಎಮ್. ವೈ. ಘೋರ್ಪಡೆ, ಅವರು ಮಾರ್ಚ್ 25, 1972 ರಂದು ವಿಧಾನಸಭೆಯಲ್ಲಿ 1972-73ನೇ ವರ್ಷದ ತಾತ್ಕಾಲಿಕ ಆಯವ್ಯಯಪತ್ರವನ್ನು ಮಂಡಿಸುವ ಸಂದರ್ಭದಲ್ಲಿ ಮಾಡಿದ ಭಾಷಣ.

ಮಾನ್ಯ ಸಭಾಪತಿಯವರೆ,

1. ನೂತನ ಸರ್ಕಾರ ಈಗ ತಾನೆ ಅಧಿಕಾರ ವಹಿಸಿಕೊಂಡಿದೆ. ರಾಜ್ಯಕ್ಕೆ ಒದಗಿದ ಕಷ್ಟಕರವಾದ ಆರ್ಥಿಕ ಸ್ಥಿತಿಯನ್ನು ಮತ್ತು ರಾಜ್ಯವನ್ನು ಎದುರಿಸುವ ಬೇರೆಲ್ಲ ದೊಡ್ಡ ದೊಡ್ಡ ಸಮಸ್ಯೆಗಳನ್ನು ಪುನಃ ಪರಿಶೀಲಿಸಲು ಸರ್ಕಾರಕ್ಕೆ ಇನ್ನಷ್ಟು ಅವಕಾಶ ದೊರೆಯಲು ಅನುಕೂಲವಾಗುವಂತೆ 1972-73ನೇ ವರ್ಷದ ಮೊದಲ ನಾಲ್ಕು ತಿಂಗಳುಗಳ ಬಗ್ಗೆ ಲೇಖಾನುದಾನ (ವೋಟ್ ಅನ್ ಅಕೌಂಟ್) ಪಡೆದು ಕೊಳ್ಳುವುದೇ ಈ ತಾತ್ಕಾಲಿಕ ಆಯವ್ಯಯ ಪತ್ರವನ್ನು ಮಂಡಿಸುವ ಉದ್ದೇಶ ವಾಗಿದೆ. ಈಗಿನ ಅನಿಶ್ಚಿತ ಸ್ಥಿತಿಯನ್ನು ಕೊನೆಗಾಣಿಸಿ, ರಾಜ್ಯದಲ್ಲಿ ಅತ್ಯವಶ್ಯವಾದ ಅಭಿವೃದ್ಧಿ ಕಾರ್ಯಕಲಾಪಗಳನ್ನು ನಿರ್ವಹಿಸಿಕೊಂಡು ಸಾಮಾಜಿಕ ನ್ಯಾಯ ದೊಡನೆ ಸಮಂಜಸ ಬೆಳವಣಿಗೆಯನ್ನು ನಡೆಸಿಕೊಂಡು ಹೋಗಬಲ್ಲ ಆರ್ಥಿಕ ನೀತಿ ಯೊಂದನ್ನು ಕುದುರಿಸಿಕೊಳ್ಳಬೇಕಾಗಿದೆ. ಈ ಆಯವ್ಯಯಪತ್ರದಲ್ಲಿ ಹೊಸ ತೆರಿಗೆ ಹಾಕುವ ಸೂಚನೆಗಳೇನೂ ಇಲ್ಲ. ಇಂದಿನ ಪರಿಸ್ಥಿತಿಯನ್ನು ಮತ್ತು ನಮ್ಮ ರಾಜ್ಯದ ಮುಖ್ಯ ಅಗತ್ಯಗಳನ್ನು ಇನ್ನಷ್ಟು ಸಮಗ್ರವಾಗಿಯೂ ಆಳವಾಗಿಯೂ ಅರಿತುಕೊಂಡು, ಇನ್ನಷ್ಟು ಉದ್ದೇಶಪೂರ್ಣ ಆಯವ್ಯಯ ಪತ್ರವನ್ನು ಸುಮಾರು ಜೂನ್ ತಿಂಗಳಿನಲ್ಲಿ ಈ ಸದನದ ಮುಂದೆ ಮಂಡಿಸಲಾಗುವುದು.

2. ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಗಳ ಪರಿಣಾಮವಾಗಿ ಕೇಂದ್ರ ಸರ್ಕಾರಕ್ಕೂ ರಾಜ್ಯ ಸರಕಾರಗಳಿಗೂ ನಡುವೆ ರಾಜಕೀಯ ಮತ್ತು ಆರ್ಥಿಕ ಸಹಕಾರದ ಹೊಸ ಯುಗವೊಂದು ಮೂಡಿದೆ. ಸಮತೋಲನದ ಬೆಳವಣಿಗೆಯನ್ನು ಕುದುರಿಸಿಕೊಂಡು, ಜನತೆಯ ಆಶೋತ್ತರಗಳಿಗೆ ಅನುಗುಣ ವಾದ ಅಭಿವೃದ್ಧಿ ಕಾರ್ಯಕಲಾಪಗಳು ನೆರವೇರುವಂತೆ ನೋಡಿಕೊಳ್ಳಲು ಕೇಂದ್ರ-ರಾಜ್ಯ ಸಂಬಂಧಗಳ ಬಗೆಗೆ ನೂತನ ಸಂಪ್ರದಾಯಗಳನ್ನೂ, ಆದರ್ಶ ಗಳನ್ನೂ ಕುದುರಿಸುವ ಉದ್ದೇಶಕ್ಕಾಗಿ ರಚನಾತ್ಮಕ ಸಹಕಾರದ ಈ ನೂತನ ವಾತಾವರಣವನ್ನು ಬಳಸಿಕೊಳ್ಳಬೇಕಾಗಿದೆ. ಪ್ರಜಾಸಮುದಾಯವು ಇಷ್ಟೊಂದು ಭಾರಿ ಪ್ರಮಾಣದಲ್ಲಿ ಬೆಂಬಲಿಸಿರುವ ಸಾಮಾಜಿಕ ಹಾಗೂ ಆರ್ಥಿಕ ಗುರಿಗಳಿಗೆ

ನಮ್ಮ ಆರ್ಥಿಕ ನೀತಿಗಳು ಸುಸ್ಪಷ್ಟವಾಗಿ ಹೊಂದಾಣಿಕೆಯಾಗುವಂತಿರಬೇಕು. ಕೇಂದ್ರ ಸರ್ಕಾರವನ್ನು ಆಕ್ಷೇಪಿಸುವ ಪ್ರವೃತ್ತಿಯನ್ನು ತೊರೆದು, ಅದರ ಬದಲಾಗಿ ಸಮಾನೋದ್ದೇಶಗಳನ್ನು ನಿರ್ವಹಿಸುವ ಧೈರ್ಯ ಹಾಗೂ ಸಹಕಾರದಿಂದ ಶ್ರಮಿಸುವ ಪ್ರವೃತ್ತಿಯನ್ನು ಬೆಳಸಿಕೊಳ್ಳಬೇಕಾಗಿದೆ. ಸರಿಯಾದ ಮಾರ್ಗದಲ್ಲಿ ಸ್ಪಷ್ಟ ಮತ್ತು ನಿರಂತರ ಪ್ರಯತ್ನ ನಡೆಯಬೇಕೆಂಬುದೇ ಜನತೆಯ ಅಪೇಕ್ಷೆ. ಇಂದಿನ ಪರಿಸ್ಥಿತಿ ಕಷ್ಟಕರವಾಗಿರಬಹುದು, ಆಶಾಜನಕವಲ್ಲದೆಯೂ ಇರಬಹುದು. ಆದರೆ, ಪರಿಸ್ಥಿತಿ ಏನೇ ಇದ್ದರೂ, ಅದನ್ನು ಹತೋಟಿಯಲ್ಲಿಟ್ಟುಕೊಂಡು ಹೆಜ್ಜೆ ಹೆಜ್ಜೆಗೆ ಬದಲಾಯಿಸಬಹುದಾಗಿದೆ. ಈ ಕೆಲಸವನ್ನು ನಿರ್ಭೀತಿಯಿಂದ ನಿರ್ವಹಿಸಿ, ಮೈಸೂರು ರಾಜ್ಯಕ್ಕೆ ಉಜ್ವಲ ಭವಿಷ್ಯವನ್ನು ರೂಪಿಸಲು ಸರ್ಕಾರದವರು ಬದ್ಧಕಂಕಣರಾಗಿದ್ದಾರೆ.

3.1 ಜುಲೈ, 1971ರಲ್ಲಿ ಪಾರ್ಲಿಮೆಂಟು 1971–72ನೇ ವರ್ಷಕ್ಕೆ ಅನುಮೋದಿಸಿದ ಆಯವ್ಯಯ ಪತ್ರದಲ್ಲಿ ಒಟ್ಟು 15.72 ಕೋಟಿ ರೂಪಾಯಿಯಷ್ಟು ಕೊರತೆಯನ್ನು ಅಂದಾಜು ಮಾಡಲಾಗಿತ್ತು. ಪರಿಷ್ಕೃತ ಅಂದಾಜಿನಲ್ಲಿ ಈಗ ಒಟ್ಟು 42.60 ಕೋಟಿ ರೂಪಾಯಿ ಕೊರತೆ ಕಂಡುಬರುವುದಾಗಿದೆ. ತೆರಿಗೆಯಿಂದಲೂ ತೆರಿಗೆ ಹೊರತಾದ ಬೇರೆ ಮೂಲಗಳಿಂದಲೂ ನಿರೀಕ್ಷಿಸಿದ್ದ ವರಮಾನವು 10.27 ಕೋಟಿ ರೂಪಾಯಿಯಷ್ಟು ಕಡಿಮೆ ಬಿದ್ದು, ಕಾವೇರಿ ಯೋಜನೆ ಸಹಿತವಾದ ನೀರಾವರಿ ಯೋಜನೆ ಬಗೆಗಿನ ವೆಚ್ಚದಲ್ಲಿ 11 ಕೋಟಿ ರೂಪಾಯಿ ಹೆಚ್ಚಿದುದೇ ಈ ಕೊರತೆಯ ಹೆಚ್ಚಳಕ್ಕೆ ಮುಖ್ಯ ಕಾರಣ

3.2 ಮಾರ್ಚ್ 31, 1971ರಂದು ಇದ್ದ ಓವರ್‌ಡ್ರಾಫ್ಟ್ 30.38 ಕೋಟಿ ರೂಪಾಯಿ. 1971–72ನೇ ವರ್ಷದ ಕೊನೆಗೆ 76.38 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಉಳಿಯುವ ನಿರೀಕ್ಷೆಯಿದೆ. ಒಟ್ಟು ಸಾಲದ ಹೊಣೆ 427.73 ಕೋಟಿ ರೂಪಾಯಿ. ಇದರಲ್ಲಿ ಈ ಮುಂದಿನ ಬಾಬುಗಳಿವೆ :—

		(ಕೋಟಿ ರೂ.)
ಮಾರುಕಟ್ಟೆ ಸಾಲ	....	77.49
ಕೇಂದ್ರ ಸರಕಾರದಿಂದ ಪಡೆದ ಸಾಲ	....	321.83
ಬೇರೆ ಸಾಲ	....	28.41

4.1 1972-73ನೇ ವರ್ಷದ ಆಯವ್ಯಯ ಅಂದಾಜುಗಳ ಪ್ರಕಾರ ಬರುವ ರೆವಿನ್ಯೂ ವರಮಾನ 293.26 ಕೋಟಿ ರೂಪಾಯಿ; ಸಂಭವಿಸಬಹುದಾದ ರೆವಿನ್ಯೂ ವೆಚ್ಚ 292.05 ಕೋಟಿ ರೂಪಾಯಿ. ಇದರಿಂದ 1.21 ಕೋಟಿ ರೂಪಾಯಿಯಷ್ಟು ರೆವಿನ್ಯೂ ಹೆಚ್ಚುವರಿ ಫಲಿಸುವುದು. ರೆವಿನ್ಯೂ ವರಮಾನದಲ್ಲಿ ಮುಖ್ಯವಾಗಿ ಈ ಮುಂದಿನ ಬಾಬುಗಳು ಸೇರುತ್ತವೆ:—

		(ಕೋಟಿ ರೂ.)
ಮಾರಾಟ ತೆರಿಗೆ	....	57.00
ಅಬ್ಕಾರಿ	....	25.60
ಮೋಟಾರು ವಾಹನ ತೆರಿಗೆ	....	11.10
ಮನೋರಂಜನೆ ತೆರಿಗೆ ಮತ್ತು ವಿದ್ಯುಚ್ಛಕ್ತಿ ಮೇಲಿನ ತೆರಿಗೆ, ಇತ್ಯಾದಿ	....	14.13
ಅರಣ್ಯ	....	16.45
ಆದಾಯ ತೆರಿಗೆ ಅಂಶ	....	24.42
ಒಕ್ಕೂಟದ ಅಬ್ಕಾರಿ ಶುಲ್ಕದ ಅಂಶ	....	25.06
ಕೇಂದ್ರದಿಂದ ಸಹಾಯಾನುದಾನ (ಗ್ರಾಂಟ್ ಇನ್ ಏಯ್ಡ್)	....	29.26

4.2 292.05 ಕೋಟಿ ರೂಪಾಯಿ ರೆವಿನ್ಯೂ ವೆಚ್ಚದಲ್ಲಿ —

		(ಕೋಟಿ ರೂ.)
ವಿದ್ಯಾಭ್ಯಾಸಕ್ಕೆ	....	60.25
ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಗೆ	....	18.77
ಲೋಕೋಪಯೋಗಿ ಕಾಮಗಾರಿಗಳಿಗೆ	....	25.06
ನೀರಾವರಿಗೆ (ನೀರಾವರಿ ಬಂಡವಾಳದ ಮೇಲಣ ಬಡ್ಡಿ ಸಮೇತ)	....	23.30
ವ್ಯವಸಾಯಕ್ಕೆ	....	11.95
ಸಿವಿಲ್ ಆಡಳಿತಕ್ಕೆ	....	23.13

ಸೇರುತ್ತವೆ. 292.05 ಕೋಟಿ ರೂಪಾಯಿ ರೆವಿನ್ಯೂ ವೆಚ್ಚದ ಪೈಕಿ, ಯೋಜನೆಗೆ ಸಂಬಂಧಪಟ್ಟ ಬಾಬುಗಳಿಗೆ 33.59 ಕೋಟಿ ರೂಪಾಯಿ ಮತ್ತು ಯೋಜನೇತರ ಕಾರ್ಯಗಳಿಗೆ 258.46 ಕೋಟಿ ರೂಪಾಯಿ ವೆಚ್ಚವಾಗುವುದು. ಈ ಯೋಜನೇತರ ವೆಚ್ಚದ ಪೈಕಿ ಹೆಚ್ಚಿನ ಅಂಶವು ಹಿಂದಿನ ಯೋಜನಾವಧಿಯಲ್ಲಿ ನಡೆದ ಅಭಿವೃದ್ಧಿಗಾಗಿ ಒಪ್ಪಿಕೊಂಡ ವೆಚ್ಚದಿಂದ ಸಂಭವಿಸಿದ್ದಾಗಿದೆ.

4.3 1970ರಲ್ಲಿ ಸರ್ಕಾರಿ ನೌಕರರ ವೇತನ ಪರಿಷ್ಕರಣ, ಆಮೇಲೆ ಜನವರಿ 1, 1972ರಿಂದ ಮಂಜೂರುಮಾಡಿದ ತುಟ್ಟಿಭತ್ಯ — ಇದರಿಂದ ಪ್ರತಿವರ್ಷ ಸುಮಾರು 17 ಕೋಟಿ ರೂಪಾಯಿ ವೆಚ್ಚ ಉಂಟಾಗುವುದು. ಈ ಸಮಸ್ಯೆ ಎಲ್ಲ ರಾಜ್ಯಗಳಲ್ಲೂ ಇದೆ. ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವನ್ನು ಬಗೆಹರಿಸುವ ಯಾವ ಉಪಾಯವೂ ಇದುವರೆಗೆ ಕಂಡುಬಂದಿಲ್ಲ. ಭಾರತ ಸರ್ಕಾರ, ಯೋಜನಾ ಆಯೋಗ ಮತ್ತು ಹೊಸ ಆರ್ಥಿಕ ಆಯೋಗ — ಇವು ಈ ಸಮಸ್ಯೆಗೆ ಹೆಚ್ಚಿನ ಗಮನ ಕೊಡುತ್ತವೆಂದು ಹಾರೈಸಲಾಗಿದೆ.

4.4 1972-73ನೇ ವರ್ಷದ ಆಯವ್ಯಯ ಪತ್ರದಲ್ಲಿ 41.28 ಕೋಟಿ ರೂಪಾಯಿ ಬಂಡವಾಳ ವೆಚ್ಚಕ್ಕೆ ಅವಕಾಶ ಕಲ್ಪಿಸಿದೆ. ಇದರಲ್ಲಿ ನೀರಾವರಿ ನಿಮಿತ್ತವಾದ 25.76 ಕೋಟಿ ರೂಪಾಯಿ ಸೇರಿದೆ. ಈ ಪೈಕಿ, 11 ಕೋಟಿ ರೂಪಾಯಿ ಹಣವು ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳಿಗೆ ವೆಚ್ಚವಾಗುವುದು.

4.5 ಮಾರುಕಟ್ಟೆ ಸಾಲಗಳಿಂದ 12.52 ಕೋಟಿ ರೂಪಾಯಿ ದೊರೆಯುವುದೆಂದೂ 7.56 ಕೋಟಿ ರೂಪಾಯಿ ಮರುಪಾವತಿ ಮಾಡಬೇಕಾಗುವುದೆಂದೂ, ಇದರಿಂದ 4.96 ಕೋಟಿ ರೂಪಾಯಿಯಷ್ಟು ನಿವ್ವಳ ಬಂಡವಾಳ ವರಮಾನ ಬರುವುದೆಂದೂ ನಿರೀಕ್ಷೆಯಿದೆ. ಕೇಂದ್ರ ಸರ್ಕಾರದಿಂದ 63.72 ಕೋಟಿ ರೂಪಾಯಿ ಸಾಲದ ನೆರವು ಬರುವುದೆಂದೂ ಕೇಂದ್ರಕ್ಕೆ 65.65 ಕೋಟಿ ರೂಪಾಯಿ ಸಾಲವನ್ನು ಮರುಪಾವತಿ ಮಾಡಬೇಕೆಂದೂ, ಇದರಿಂದ ನಿವ್ವಳವಾಗಿ 1.93 ಕೋಟಿ ರೂಪಾಯಿ ವೆಚ್ಚವಾಗುವುದೆಂದೂ ಊಹಿಸಲಾಗಿದೆ.

4.6 ಬೇರೆ ಎಲ್ಲ ಬಾಬುಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಾಗ, ಬಂಡವಾಳ ಲೆಕ್ಕದಲ್ಲಿ 31.73 ಕೋಟಿ ರೂಪಾಯಿ ಕೊರತೆ ಕಂಡುಬರುವುದು. ಆದರೆ 1.21 ಕೋಟಿ ರೂಪಾಯಿಯಷ್ಟು ರೆವಿನ್ಯೂ ಹೆಚ್ಚುವರಿ ಇರುವ ಕಾರಣ ಒಟ್ಟು ಕೊರತೆ 30.52 ಕೋಟಿ ರೂಪಾಯಿಗೆ ನಿಲ್ಲುವುದು.

5. ಬಾಂಗ್ಲಾ ದೇಶದ ನಿರಾಶ್ರಿತರ ಸಹಾಯಕ್ಕಾಗಿ ಹಣ ಸಂಗ್ರಹ ಮಾಡಲು ಸರ್ಕಾರದವರು ಮಾಡಿದ ಪ್ರಯತ್ನವನ್ನು ಹೇಳದೆ ಹೋದರೆ, 1972-73ನೇ ವರ್ಷದ ಆಯವ್ಯಯ ಅಂದಾಜು ಪತ್ರದ ಮುಖ್ಯಾಂಶಗಳನ್ನು

ಪೂರ್ತಿಯಾಗಿ ಹೇಳಿದಂತಾಗುವುದಿಲ್ಲ. ರಾಷ್ಟ್ರಪತಿಯವರ ಆಡಳಿತ ಕಾಲದಲ್ಲಿ ಈ ಉದ್ದೇಶಕ್ಕಾಗಿ ಕೆಲವಾರು ಹೊಸ ತೆರಿಗೆಗಳನ್ನು ವಿಧಿಸಲಾಗಿತ್ತು. ಇದರಿಂದ 1972-73 ರಲ್ಲಿ 184 ಲಕ್ಷ ರೂಪಾಯಿ ಆದಾಯ ಬರುವ ನಿರೀಕ್ಷೆಯಿದೆ. ಇದನ್ನು ಕೇಂದ್ರ ಸರ್ಕಾರದ ಲೆಕ್ಕಕ್ಕೆ ವರ್ಗಾಯಿಸಬೇಕಾಗುತ್ತದೆ. ಈ ತೆರಿಗೆಗಳು ಹೀಗಿವೆ :—

(ಲಕ್ಷ ರೂಪಾಯಿ)

1. ಮೈಸೂರು ಮನೋರಂಜನ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ ಕ್ರಮಾಂಕ 14/1971) 20.00

2. ಮೈಸೂರು ಮೋಟಾರು ವಾಹನಗಳ (ಪ್ರಯಾಣಿಕರ ಮತ್ತು ಸರಕಿನ ಮೇಲಿನ) (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ ಕ್ರಮಾಂಕ 15/1971) 50.00

3. ಮೈಸೂರು ಮೋಟಾರು ವಾಹನ ತೆರಿಗೆ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ ಕ್ರಮಾಂಕ 16/1971) 10.00

4. ಮೈಸೂರು ಮುದ್ರಾಂಕ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ ಕ್ರಮಾಂಕ 17/1971) 24.00

5. ಮೈಸೂರು ಮಾರಾಟ ತೆರಿಗೆ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ ಕ್ರಮಾಂಕ 18/1971) 80.00

ಒಟ್ಟು 184.00

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಸ್ಫೂರ್ತಿದಾಯಕ ನೇತೃತ್ವದಲ್ಲಿ ಬಾಂಗ್ಲಾ ದೇಶದ ಬೆಂಬಲಕ್ಕಾಗಿಯೂ ಸಮಾಜವಾದ, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವಗಳ ಆದರ್ಶ ಸಾಧನೆಗಾಗಿಯೂ ನಡೆದ ರಾಷ್ಟ್ರಕಾರ್ಯಕ್ಕೆ ಮೈಸೂರಿನ ಜನತೆ ಸಲ್ಲಿಸಿದ ಕೊಡುಗೆಯನ್ನು ಮೇಲೆ ಹೇಳಿದ ಪ್ರಯತ್ನಗಳು ಸೂಚಿಸುತ್ತವೆ.

6. 1972-73ನೇ ವರ್ಷಕ್ಕೆ ಯೋಜನಾ ಆಯೋಗವು ಒಪ್ಪಿಗೆ ನೀಡಿದ ಯೋಜನಾವ್ಯಯ 72.30 ಕೋಟಿ ರೂಪಾಯಿ. ನಾಲ್ಕನೇ ಪಾಂಚವಾರ್ಷಿಕ ಯೋಜನಾವಧಿಯ ಮೊದಲ ಮೂರು ವರ್ಷಗಳ ಪೈಕಿ 1969-70ರಲ್ಲಿ 66.23 ಕೋಟಿ ರೂಪಾಯಿ, 1970-71ರಲ್ಲಿ 68.98 ಕೋಟಿ ರೂಪಾಯಿ ಮತ್ತು 1971-72ರಲ್ಲಿ 77.74 ಕೋಟಿ ರೂಪಾಯಿ ವೆಚ್ಚವನ್ನು ಯೋಜನಾ ವೆಚ್ಚವೆಂದು ಗೊತ್ತುಪಡಿಸಲಾಗಿದೆ. ಹೀಗೆ, ಇದುವರೆಗೆ ವಹಿಸಿದ ಯೋಜನಾ ವೆಚ್ಚ 212.95 ಕೋಟಿ ರೂಪಾಯಿ, ಎಂದರೆ ಒಟ್ಟು 350 ಕೋಟಿ ರೂಪಾಯಿ ಯೋಜನಾವ್ಯಯ ಪ್ರಮಾಣದ ಶೇಕಡಾ 61 ರಷ್ಟಾಗುತ್ತದೆ. ಈ ವೆಚ್ಚದ ಯೋಜನೆಗಳನ್ನೆಲ್ಲ ಪೂರ್ತಿಯಾಗಿ ಕಾರ್ಯರೂಪಕ್ಕೆ ತರಬಲ್ಲೆವೆಂಬ ಭರವಸೆ ನಮಗಿದೆ.

7. 1972-73ನೇ ವರ್ಷಕ್ಕೆ ಗೊತ್ತುಪಡಿಸಿದ ಯೋಜನಾ ವೆಚ್ಚದಲ್ಲಿ ಈ ಮುಂದೆ ಹೇಳುವ ಬಾಬುಗಳು ಸೇರುತ್ತವೆ:—

	(ಕೋಟಿ ರೂಪಾಯಿ)
ಕೃಷಿ ಕಾರ್ಯಕ್ರಮ	16.75
ನೀರಾವರಿ ಮತ್ತು ವಿದ್ಯುಚ್ಛಕ್ತಿ	29.16
ಸಹಕಾರ ಮತ್ತು ಸಾಮುದಾಯಿಕ ಅಭಿವೃದ್ಧಿ	3.12
ಉದ್ದಿಮೆ ಮತ್ತು ಗಣಿ ಕೆಲಸ	4.08
ಸಾರಿಗೆ ಮತ್ತು ಸಂಪರ್ಕ ಸಾಧನ	3.27
ಸಮಾಜ ಸೇವಾ ಕಾರ್ಯಗಳು	15.62
ವಿವಿಧ ಬಾಬುಗಳು	0.30
ಒಟ್ಟು	72.30

8. ಈ ಯೋಜನಾವೆಚ್ಚದ ಹೊರತಾಗಿ, ಕೇಂದ್ರ ಪುರಸ್ಕೃತ ಕಾರ್ಯಗಳಿಗೆ 9.71 ಕೋಟಿ ರೂಪಾಯಿ ಮತ್ತು ಕೇಂದ್ರ ವಲಯದ ಕಾರ್ಯಗಳಿಗೆ 9.59 ಕೋಟಿ ರೂಪಾಯಿ ವೆಚ್ಚವಾಗಬೇಕೆಂದು ಗೊತ್ತುಪಡಿಸಿದೆ. ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯದ ಕಾರ್ಯಗಳು ಪೂರ್ತಿಯಾಗಿ ಭಾರತ ಸರ್ಕಾರದವರ ಹಣ ಸಹಾಯದಿಂದಲೇ ನಡೆಯುತ್ತವೆ. ಆದ್ದರಿಂದ, 72.30 ಕೋಟಿ ರೂಪಾಯಿ ವೆಚ್ಚದ ರಾಜ್ಯ ಯೋಜನೆಯ ಸಮೇತವಾಗಿ, ಒಟ್ಟು 91.60 ಕೋಟಿ ರೂಪಾಯಿ ವೆಚ್ಚದಲ್ಲಿ, ಕೇಂದ್ರದಿಂದ ಬರುವ ಒಟ್ಟು ಸಹಾಯ ಸುಮಾರು 60 ಕೋಟಿ ರೂಪಾಯಿ. ಇದರ ಜೊತೆಗೆ ನೀರು ಸರಬರಾಜು, ಗೃಹನಿರ್ಮಾಣ, ಚಿಕ್ಕವುಟ್ಟ ನೀರಾವರಿ, ಭೂ ಅಭಿವೃದ್ಧಿ ಮುಂತಾದವುಗಳಿಗೆ ಸಂಬಂಧಿಸಿದ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಭಾರತದ ಲೈಫ್ ಇನ್ಸೂರೆನ್ಸ್ ಕಾರ್ಪೊರೇಷನ್ ಮತ್ತು ಅಗ್ರಿಕಲ್ಚರಲ್ ರಿಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಗಳು ಗಣನಾರ್ಹ ಸಹಾಯ ನೀಡುತ್ತವೆ.

9. 1972-73 ನೇ ವರ್ಷಕ್ಕೆ ಗೊತ್ತುಪಡಿಸಿದ ಯೋಜನಾ ವೆಚ್ಚಕ್ಕೆ ಬೇಕಾಗುವ ಹಣವನ್ನು ಈ ಮುಂದಿನಂತೆ ಒದಗಿಸಿಕೊಳ್ಳಲಾಗುವುದು :—

(ಕೋಟಿ ರೂಪಾಯಿ)

1.	ಎಂ.ಎಸ್.ಇ.ಬಿ. ಮತ್ತು ಸರ್ಕಾರದವರು ಸಮಾಲೋಚನೆ ನಡೆಸಿ ಪಡೆಯುವ ಸಾಲ	12.57
2.	ಈಗಿನ ದರದಲ್ಲಿ ತೆರಿಗೆ ವಿಧಿಸಿ ಹೆಚ್ಚಿನ ಸಂಪನ್ಮೂಲ ಸಂಗ್ರಹ	18.29
3.	ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ಗೊತ್ತುಪಡಿಸಿದ ಸೂತ್ರಕ್ಕೆ ಅನುಸಾರವಾಗಿ ಕೇಂದ್ರ ಸಹಾಯ	33.56
	ಒಟ್ಟು	64.42

ಇದರಿಂದ 7.88 ಕೋಟಿ ರೂಪಾಯಿ ಕೊರತೆ ಉಳಿಯುವುದು. ಇದನ್ನು ಯೋಜನೆಗಾಗಿ ಕೇಂದ್ರದಿಂದ ಬರುವ ವಿಶೇಷ ಸಹಾಯದಿಂದ ತುಂಬಿಕೊಳ್ಳುವ

ನಿರೀಕ್ಷೆಯಿದೆ. 350 ಕೋಟಿ ರೂಪಾಯಿಯ ಯೋಜನಾ ವೆಚ್ಚದ ನಿಮಿತ್ತ ವಾಗಿ ಕೇಂದ್ರದಿಂದ ಬರುವ 173 ಕೋಟಿ ರೂಪಾಯಿ ಸಹಾಯದ ಜೊತೆಗೆ 105 ಕೋಟಿ ರೂಪಾಯಿಯಷ್ಟು ವಿಶೇಷ ಸಹಾಯ ಕೊಡುವುದಾಗಿ ಕೇಂದ್ರ ಸರ್ಕಾರದವರು ಸೂಚಿಸಿದ್ದರು. ಇದರಲ್ಲಿ ಯೋಜನಾ ಕಾರ್ಯಗಳಿಗೆ 60 ಕೋಟಿ ರೂಪಾಯಿ, ಯೋಜನೇತರ ಕಾರ್ಯಗಳಿಗೆ 45 ಕೋಟಿ ರೂಪಾಯಿ ಎಂದು ನಿಶ್ಚಿತವಾಗಿತ್ತು. ಇದುವರೆಗೆ ಕೇಂದ್ರ ಸರ್ಕಾರದವರಿಂದ ವಿಶೇಷ ನೆರವಿನ ರೂಪದಲ್ಲಿ 42.55 ಕೋಟಿ ರೂಪಾಯಿ ಬಂದಿದೆ.

10.1 ಪ್ರಸಕ್ತ ವರ್ಷದ ಕೊನೆಗೆ ಸುಮಾರು 76 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಉಳಿಯುವ ನಿರೀಕ್ಷೆಯಿದೆ. ಇದು ಅನಿರ್ದಿಷ್ಟವಾಗಿ ಹೆಚ್ಚುತ್ತಾ ಹೋಗದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳೆರಡೂ ಕಾತರವಾಗಿವೆ. ರಾಜ್ಯದ ಪ್ರಗತಿಗೆ ಅವಶ್ಯವೆಂದು ಭಾವಿಸಿರುವ ಯೋಜನಾ ಕಾರ್ಯಗಳಿಗೆ ಹಾಗೂ ಯೋಜನೇತರ ಕಾರ್ಯಗಳಿಗೆ ದೀರ್ಘಾವಧಿಯ ಹಾಗೂ ಇನ್ನಷ್ಟು ಸ್ಥಿರವಾದ ಬೇರೆ ಧನ ಪರಿಹಾರಗಳನ್ನು ಹುಡುಕುವುದು ಅಪೇಕ್ಷಣೀಯ ವಾಗಿದೆ.

10.2 ಕೇಂದ್ರವು ಸುಯೋಜಿತ ಅಭಿವೃದ್ಧಿಗಾಗಿ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಲು ಭಾರಿ ಪ್ರಯತ್ನಮಾಡಿ ಅದನ್ನು ರಾಜ್ಯ ಸರ್ಕಾರಗಳಿಗೆ ಹಂಚುತ್ತದೆ. ಹೀಗಿದ್ದರೂ ಕೂಡ, ಎಲ್ಲ ರಾಜ್ಯಗಳು ಸಮಪ್ರಮಾಣದಲ್ಲಿ ಅಭಿವೃದ್ಧಿ ಹೊಂದುವಂತೆ ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ, ಕೇಂದ್ರದಿಂದ ರಾಜ್ಯಕ್ಕೆ ಹಣ ವರ್ಗಾವಣೆ ಮಾಡುವ ಈ ಸಮಗ್ರ ಕಾರ್ಯವನ್ನು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಲು ಅವಕಾಶವಿದೆ. ಸಾಲ ಮರುಪಾವತಿಯ ಭಾರಿ ಹೊರೆಯು ಮೈಸೂರು ರಾಜ್ಯಕ್ಕೆ ಹಿಂದಿನಿಂದಲೂ ಅಂಟಿಕೊಂಡು ಬಂದ ಅನಿಷ್ಟ ಪರಂಪರೆ. ಅದರಿಂದ ಪ್ರತಿಬಂಧಕ ಪರಿಣಾಮಗಳೊದಗಿ, ಅಭಿವೃದ್ಧಿಯ ದಿಸೆ ಮತ್ತು ಗತಿ ವಿಚಲಿತವಾಗುವ ಭಯವುಂಟು. ಈ ಬಗೆಯ ಅನಿಷ್ಟವನ್ನು ಇದಿರಿಸಬೇಕಾದ ಮೈಸೂರಿನಂಥ ರಾಜ್ಯಗಳಿಗೆ ವಿಶೇಷ ಗಮನಕೊಡುವುದು ಅವಶ್ಯ. ಈ ಸಮಸ್ಯೆಗೆ ಪರಿಹಾರಗಳನ್ನು ಹುಡುಕುವ ನಿಮಿತ್ತ, ಯೋಜನಾ ಆಯೋಗವು ಈ ಅಂಶಗಳನ್ನು ಇನ್ನಷ್ಟು ಸೂಕ್ಷ್ಮವಾಗಿ ಪರಿಶೀಲಿಸಬೇಕೆಂದು ನಿರ್ಧರಿಸಿದ ಸಂಗತಿ ಗಮನಾರ್ಹವಾಗಿದೆ. ಆರನೇ ಆರ್ಥಿಕ ಆಯೋಗ ಕೂಡ ಕೇಂದ್ರ–ರಾಜ್ಯಗಳ ಈ ಆರ್ಥಿಕ ಸಂಬಂಧ ವಿಚಾರವನ್ನು ವ್ಯಾಪಕ ರೀತಿಯಲ್ಲಿ ಪರೀಕ್ಷಿಸಬೇಕಾಗುವುದು.

10.3 ವಾಸ್ತವಿಕ ದೃಷ್ಟಿಯಿಂದ ಆರ್ಥಿಕ ಸ್ಥಿತಿಯ ಸಮೀಕ್ಷೆ ನಡೆಸುವ ನಿಮಿತ್ತವಾಗಿ, ಹಾಗೂ ಕೇಂದ್ರ–ರಾಜ್ಯಗಳ ನಡುವಣ ಆರ್ಥಿಕ ಸಂಬಂಧಗಳಿಗೆ ಇನ್ನಷ್ಟು ಸುವ್ಯವಸ್ಥಿತ ಹಾಗೂ ವೈಜ್ಞಾನಿಕ ತಳಹದಿಯನ್ನು ಕಲ್ಪಿಸಿಕೊಡುವ ನಿಮಿತ್ತವಾಗಿ, ರಾಜ್ಯಗಳ ಹಾಗೂ ಕೇಂದ್ರದ ನಡುವೆ ಹೊಸದಾಗಿ ಮಾತುಕತೆ ಪ್ರಾರಂಭಿಸಬೇಕಾಗುವುದು. ರಾಷ್ಟ್ರದ ಆರ್ಥಿಕ ನೀತಿಗಳಿಂದ, ಕಾರ್ಯಕ್ರಮ ಗಳಿಂದ ಮತ್ತು ಸರ್ವಸಮ್ಮತವಾದ ಗುರಿಗಳಿಂದ ಪರಮಾವಧಿ ಪ್ರಯೋಜನ ಪಡೆಯುವಂತೆ ಯೋಜನಾ ಕಾರ್ಯದ ಉಪಕರಣಗಳನ್ನು ನಿಶಿತಗೊಳಿಸಿ ಆರ್ಥಿಕ ನೀತಿಯನ್ನು ಎಚ್ಚರಿಕೆಯಿಂದ ರೂಪಿಸಿಕೊಳ್ಳಬೇಕಾಗಿದೆ. ಇದು ಪರಸ್ಪರ ಸಹಕಾರದಿಂದ ನಡೆಯಬೇಕಾದ ಕೆಲಸ. ಇದರಿಂದ, ಭಾರತದ ಏಕತೆಗೆ ಭಂಗ ಉಂಟಾಗದಂತೆ ದೇಶದ ಸಮಸ್ತ ಭಾಗಗಳ ಆರ್ಥಿಕ ಶಕ್ತಿಯನ್ನೂ ಸ್ಥಿರತೆಯನ್ನೂ ಇನ್ನಷ್ಟು ಭದ್ರಪಡಿಸಬಹುದು. ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಗಳ ಫಲವಾಗಿ ಎಲ್ಲ ರಾಜ್ಯಗಳಲ್ಲೂ ಮೂಡಿದ ರಾಜಕೀಯ ವಾತಾವರಣವು ಒಂದು ಸದವಕಾಶವನ್ನು ಒದಗಿಸಿದೆ. ಈ ಅವಕಾಶವನ್ನು ಕಳೆದುಕೊಳ್ಳಕೂಡದು.

11. ಇಂದಿನ ಸೂಕ್ಷ್ಮ ಆರ್ಥಿಕ ಪರಿಸ್ಥಿತಿಯನ್ನು ಬಗೆಹರಿಸಬೇಕಾದರೆ, ಆರ್ಥಿಕ ಆದ್ಯತೆಗಳನ್ನು ಹಾಗೂ ಶಿಸ್ತನ್ನು ಸುಧಾರಿಸಿ ಸಮರೂಪಕ್ಕೆ ತರ ಬೇಕಾಗುವುದು. ಕೇವಲ ತಾತ್ಕಾಲಿಕ ಸ್ವರೂಪದ ಕಾರ್ಯಕ್ರಮಗಳನ್ನು ತೊರೆದು, ಇನ್ನಷ್ಟು ಸುವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ಪ್ರಯತ್ನ ಕೈಕೊಳ್ಳಬೇಕು. ಈಗ ನಮ್ಮ ಬಳಿಯಿರುವ ಪರಿಮಿತ ಸಂಪನ್ಮೂಲಗಳಿಂದ ಪರಮಾವಧಿ ಫಲಗಳನ್ನು ಪಡೆಯಬೇಕಾದರೆ ಯೋಜನಾ ಕಾರ್ಯವು ಹೆಚ್ಚು ಹೆಚ್ಚಾಗಿ ಪರಿಷ್ಕೃತವಾಗುತ್ತ ಹೋಗಬೇಕು, ಇನ್ನಷ್ಟು ಕಟ್ಟುನಿಟ್ಟಾಗಿ ನಡೆಯಬೇಕು. ಸಮಾಜದ ದುರ್ಬಲ ವರ್ಗಗಳಿಗೆ ನೇರವಾಗಿ ಉಪಯುಕ್ತ ವಾಗುವ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಬೇಕು. ಹಣ ವೆಚ್ಚಮಾಡುವುದು ಮುಖ್ಯವಲ್ಲ—ಪರಿಣಾಮಕಾರಿಯಾಗಿ ಹಾಗೂ ವಿವೇಚನೆಯಿಂದ ವೆಚ್ಚಮಾಡು ವುದೇ ಮುಖ್ಯ. ಯೋಜನೆಯು ಪರಿಣಾಮಕರವಾಗಿ ಕಾರ್ಯಗತವಾಗಬೇಕಾದರೆ ಆಡಳಿತವು ದಕ್ಷವಾಗಿಯೂ ಪ್ರಾಮಾಣಿಕವಾಗಿಯೂ ನಡೆಯಬೇಕು. ಸಾಮಾಜಿಕ ನ್ಯಾಯದೊಡನೆ ಅಭಿವೃದ್ಧಿಯ ಸ್ಥೂಲ ಉದ್ದೇಶಗಳಿಗೆ ಅನುಗುಣವಾಗು ವಂತೆ ಸಂಪನ್ಮೂಲಗಳ ಸಂಗ್ರಹ ಹಾಗೂ ವೆಚ್ಚಕ್ಕೆ ಸಂಬಂಧಪಟ್ಟ ಕಾರ್ಯ ನೀತಿಗಳನ್ನು ಎಚ್ಚರಿಕೆಯಿಂದ ಕುದುರಿಸಿಕೊಳ್ಳಬೇಕಾಗುವುದು. ಅಭಿವೃದ್ಧಿಯು ತ್ವರಿತಗತಿಯಿಂದ ಮುನ್ನಡೆಯಬೇಕಾದರೆ ಈ ಅಭಿವೃದ್ಧಿಯಿಂದ ಪ್ರಯೋಜನ ಹೊಂದತಕ್ಕವರು ಬಹುಜನಕ್ಕೆ ಪರಮಾವಧಿ ಪ್ರಯೋಜನ ತರಬಲ್ಲ ಉದ್ದೇಶ ಸಾಧನೆಯ ಕಾರ್ಯದಲ್ಲಿ ಯಥಾನುಶಕ್ತಿ ಸಹಕಾರ ನೀಡಲು ಹಿಂಜರಿಯ

ಕೂಡದು. ಈ ಕೆಲಸದ ಬಗೆಗೆ ಜನತೆಯಲ್ಲಿ ಉತ್ಸಾಹ ಮೂಡಿಸುವ ಮೂಲಕ ಅನವಶ್ಯ ವೆಚ್ಚವನ್ನು ತಗ್ಗಿಸಿ, ಅದ್ಯತೆಗಳನ್ನು ನಿರ್ಧರಿಸಿ, ಪರಮಾವಧಿ ಅಭಿವೃದ್ಧಿ ಸಾಧಿಸಲು ಸರ್ಕಾರದವರು ಸರ್ವಪ್ರಯತ್ನವನ್ನೂ ಮಾಡಲಿದ್ದಾರೆ.

12. ಈಗ, 1972-73ನೇ ವರ್ಷದ ತಾತ್ಕಾಲಿಕ ಆಯವ್ಯಯದ ಅಂದಾಜುಗಳನ್ನು ತಮ್ಮ ಪರಿಶೀಲನೆಗೂ ಅನುಮೋದನೆಗೂ ತಮ್ಮ ಮುಂದೆ ಮಂಡಿಸುತ್ತೇನೆ.

V-, 31'N72
N 72-1-1-5
(A) 4886

11-35 A.M.

MADAM SPEAKER.—Sri M. Y. Ghorpade, Hon'ble Minister for Finance will now present the Statement of Supplementary and Additional demands for grants for the year 1971-72 as required under article 205 of the Constitution of India.

Sri M. Y. GHORPADE (Minister for Finance):—Madam, I rise to lay on the Table of the House the Statement of Supplementary and Additional Demands for grants for the year 1971-72.

MADAM SPEAKER :—The Statement is laid. The House will now rise to meet again on Monday the 27th March 1972 at 1-00 P. M.

The House adjourned at Thirty Seven minutes past Eleven of the Clock to meet again at one of the Clock on Monday the 27th March 1972.

WD 17082—GPB—470—17 5 72